ಈ) ಪ್ರಸಿದ್ಧ ಪ್ರವಾಸಿ 3 ಸ್ಥಳಗಳನ್ನು ಸೇರುವ ಮತ್ತು ರಾಯಚೂರು, ಬಿಜಾಪುರ ಜಿಲ್ಲೆಗಳನ್ನು ಜೋಡಿಸುವ ಹೆದ್ದಾರಿಯನ್ನು ಪ್ಯಾಕೇಜ್ 2 ರಲ್ಲಿಯೇ ಸೇರಿಸಿ ಪುನರ್ ವ್ಯವಸ್ಥೆಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ,

ಉ) ಹಾಗಿದ್ದಲ್ಲಿ, ಯಾವ ಗೊತ್ತುಪಡಿಸಿದ ಕಾಲ ಮಿತಿ ಹಾಕಿಕೊಂಡು ಅಭಿವೃದ್ಧಿ ಅಥವಾ ಪುನರ್ ವ್ಯವಸ್ಥೆಗೊಳಿಸಲಾಗುವುದು,

ಊ) ಇದಕ್ಕಾಗಿ ತಗಲುವ ಅಂದಾಜು ವೆಚ್ಚ ಎಷ್ಟು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರವನ್ನು ಕರ್ನಾಟಕ ಸರ್ಕಾರದಲ್ಲಿ ಸ್ಥಾಪಿಸಲಾಗಿರುವುದಿಲ್ಲ

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಪ್ರಶ್ನೆ (ಅ) ನಲ್ಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಈ) ಪ್ರಶ್ನೆ (ಅ) ನಲ್ಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಉ) ಪ್ರಶ್ನೆ (ಅ) ನಲ್ಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಊ) ಪ್ರಶ್ನೆ (ಅ) ನಲ್ಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

1523 (2206) ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ) – ಮಾನ್ಯ ಯುವಜನಸೇವಾ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಇಂಡೋರ್ ಸ್ಟೇಡಿಯಂ (ಒಳಾಂಗಣ ಕ್ರೀಡಾಂಗಣ) ಗಳ ಸಂಖ್ಯೆ ಎಷ್ಟು, (ಜಿಲ್ಲಾವಾರು ಪಟ್ಟಿ ನೀಡುವುದು),

ಆ) ರಾಜ್ಯದಲ್ಲಿ ಇನ್ನು ನಿರ್ಮಾಣ ಹಂತದಲ್ಲಿರುವ ಒಳಾಂಗಣ ಕ್ರೀಡಾಂಗಣ ಸಂಖ್ಯೆ ಎಷ್ಟು, ಅವುಗಳ ನಿರ್ಮಾಣ ಕಾರ್ಯ ಎಷ್ಟು ವರ್ಷಗಳಿಂದ ನಡೆಯುತ್ತಿದೆ,

ಇ) ನಿರ್ಮಾಣ ಹಂತದಲ್ಲಿರುವ ಒಳಾಂಗಣ ಕ್ರೀಡಾಂಗಣಗಳನ್ನು ಪೂರ್ಣಗೊಳಿಸುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಈ) ಯಾವ ಕಾರಣಗಳಿಂದ ನಿರ್ಮಾಣ ಕಾಮಗಾರಿ ನೆನೆಗುದಿಗೆ ಬಿದ್ದಿವೆ,

ಉ) ವಿಜಾಪುರ ಒಳಾಂಗಣ ಕ್ರೀಡಾಂಗಣದ ಕೆಲಸ ಯಾವ ಹಂತದಲ್ಲಿದೆ,

ಊ) ಯಾವ ನಿರ್ದಿಷ್ಟ ಕಾಲ ಮಿತಿಗಳೊಳಗಾಗಿ ಪೂರ್ಣಗೊಳಿಸಲಾಗುವುದು?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 11 ಒಳಾಂಗಣ ಕ್ರೀಡಾಂಗಣಗಳು ಇರುತ್ತವೆ ಅವುಗಳು ಬೆಂಗಳೂರು ನಗರ ಜಿಲ್ಲೆ–2, ಮೈಸೂರು ಜಿಲ್ಲೆ–1, ರಾಯಚೂರು ಜಿಲ್ಲೆ–2, ಗುಲ್ಬರ್ಗಾ ಜಿಲ್ಲೆ–1, ಬಳ್ಳಾರಿ ಜಿಲ್ಲೆ–1, ದಕ್ಷಿಣ ಕನ್ನಡ ಜಿಲ್ಲೆ –1, ಚಿಕ್ಕಮಗಳೂರು ಜಿಲ್ಲೆ–1, ಬಾಗಲಕೋಟೆ ಜಿಲ್ಲೆ–1, ಹಾಗೂ ಚಿತ್ರದುರ್ಗ ಜಿಲ್ಲೆ –1

ಆ) ರಾಜ್ಯದಲ್ಲಿ ನಿರ್ಮಾಣ ಹಂತದಲ್ಲಿರುವ 6 ಒಳಾಂಗಣ ಕ್ರೀಡಾಂಗಣಗಳು ಇದ್ದು, ಕ್ರೀಡಾಂಗಣಗಳ ನಿರ್ಮಾಣ ಕಾರ್ಯ ಪ್ರಾರಂಭಿಸಿದ ವರ್ಷ ಈ ಕೆಳಕಂಡಂತೆ ನೀಡಲಾಗಿದೆ

1)	ಜಮಖಂಡಿ	2001–02
2)	ಬಿಜಾಪುರ	1994–95
3)	ಧಾರವಾಡ	2001–02
4)	ದಾವಣಗೆರೆ	2005–06
5)	ಶಿವಮೊಗ್ಗ	2006–07
6)	ಕೋಲಾರ	2002–03

ಇ) ನಿರ್ಮಾಣ ಹಂತದಲ್ಲಿರುವ ಒಳಾಂಗಣ ಕ್ರೀಡಾಂಗಣಗಳನ್ನು ಪೂರ್ಣಗೊಳಿಸಲು

ಈ ಕೆಳಗಿನಂತೆ ಅನುದಾನ ಬಿಡುಗಡೆಗೊಳಿಸಿ ಪೂರ್ಣಗೊಳಿಸಲು ಕ್ರಮ ಜರುಗಿಸಲಾಗಿದೆ

1) ದಾವಣಗೆರೆ 130 00 ಲಕ್ಷ ರೂಪಾಯಿಗಳು

2) ಶಿವಮೊಗ್ಗ 50 00 ಲಕ್ಷ ರೂಪಾಯಿಗಳು

3) ಧಾರವಾಡ 45 00 ಲಕ್ಷ ಮಂಜೂರಾಗಿದ್ದು ಇದರಲ್ಲಿ 22 00 ಲಕ್ಷ ಬಿಡುಗಡೆ ಮಾಡಲಾಗಿದೆ

4) ಬಿಜಾಪುರ 70 00 ಲಕ್ಷ ಮಂಜೂರಾಗಿದ್ದು ಇದರಲ್ಲಿ 34 00 ಲಕ್ಷ ಬಿಡುಗಡೆ ಮಾಡಲಾಗಿದೆ

ಮೇಲ್ಕಂಡ ಧಾರವಾಡ ಹಾಗೂ ಬಿಜಾಪುರ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕಾಗಿ 12 ನೇ ಹಣಕಾಸು ಆಯೋಗದ ಮೊದಲನೇ ಹಂತದಲ್ಲಿ 2006–07 ಸಾಲಿನಲ್ಲಿ ಎರಡು ಕಂತನ್ನು ಬಿಡುಗಡೆ ಮಾಡಿದ್ದು, ಉಳಿದ ಕಂತುಗಳನ್ನು ಸದ್ಯದಲ್ಲೇ ಬಿಡುಗಡೆ ಮಾಡಲಾಗುವುದು

ಈ) ಅಗತ್ಯ ಸಂಪನ್ಮೂಲದ ಕೊರತೆಯಿಂದಾಗಿ ವಿಳಂಬವಾಗಿರುತ್ತದೆ ನಿರ್ಮಾಣ ಹಂತದಲ್ಲಿರುವ ಒಳಾಂಗಣ ಕ್ರೀಡಾಂಗಣಗಳ ಕಾಮಗಾರಿ ಪ್ರಗತಿಯಲ್ಲಿದೆ ಕೋಲಾರ ಒಳಾಂಗಣ ಕ್ರೀಡಾಂಗಣದ ಉಳಿಕೆ ಕಾಮಗಾರಿಯನ್ನು 2007–08 ರಲ್ಲಿ ಕೈಗೆತ್ತಿಕೊಳ್ಳಲಾಗುವುದು

ಉ) ವಿಜಾಪುರದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಲು 12 ನೇ ಹಣಕಾಸು ಆಯೋಗದಿಂದ ಬೇಕಾಗಬಹುದಾದ ರೂ 70 00 ಲಕ್ಷಗಳನ್ನು 2006–07 ನೇ ಸಾಲಿನ ಮೊದಲನೇ ಹಂತದಲ್ಲಿಯೇ ಮಂಜೂರು ಮಾಡಿದೆ ಪ್ರಸ್ತುತ ಈ ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದ್ದು, ಪೂರ್ಣಗೊಳ್ಳುವ ಹಂತದಲ್ಲಿದೆ

ಊ) 2007–08 ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ